V ಗುಲ್ಬರ್ಗ ಜಿಲ್ಲೆ ಸೇಡಂ ತಾಲ್ಲೂಕಿನಲ್ಲಿ ಉಂಟಾದ ಅತಿವೃಷ್ಟಿ ಮಂತ್ರ ಪರಿಹಾರದ ಬಗ್ಗೆ

ಶ್ರೀ ವಿ. ಎಸ್. ಆಚಾರ್ಯ.—ಮಾನ್ಯ ಅಧ್ಯಕ್ಷರೇ, ಗುಲ್ಬರ್ಗ ಜಿಲ್ಲೆಯ ಸೇಡಂ ತಾಲ್ಲೂಕಿನಲ್ಲಿ ವಿಪರೀತವಾಗಿ ಅತಿವೃಷ್ಟಿಯಾಗಿ ಅಲ್ಲಿನ ರೈತರ ಬೆಳೆಗಳು ನಾಶವಾಗಿ ಹೋಗಿವೆ. ಅಲ್ಲಿನ ಕೃಷಿಕರು ಕೃಷಿಯನ್ನು ನಡೆಸುವುದಕ್ಕೂ ಕೂಡ ಸಾಧ್ಯವಾಗಿಲ್ಲ. ಅಲ್ಲಿನ ಶಾಸಕರು ಕೂಡ ಸರ್ಕಾರಕ್ಕೆ ಅನೇಕ ಸಾರಿ ಮನವಿಗಳನ್ನು ಸಲ್ಲಿಸಿದ್ದಾರೆ. ಅವರ ಮನವಿಯಲ್ಲಿ ಮುಖ್ಯವಾಗಿ ಕೇಳಿಕೊಂಡಿರುವುದೇನೆಂದರೆ, ರೈತರ ಕಂದಾಯವನ್ನು ಮನ್ನಾ ಮಾಡುವುದು ಮತ್ತು ಕೃಷಿಸಾಲ ಕೃಷಿಯನ್ನು ಮಾಡಲು ಪಡೆದು ಕೊಂಡಿರತಕ್ಕಂಥ ಸಾಲವನ್ನು ಮನ್ನಾ ಮಾಡುವುದು, ಮತ್ತೆ ಈಗ ಕೃಷಿಯನ್ನು ಮಾಡಲು ಬ್ಯಾಂಕ್ ಗಳಿಂದ ದೀರ್ಘಾವಧಿ ಸಾಲವನ್ನು ಕೊಡುವಂಥ ವ್ಯವಸ್ಥೆಯನ್ನು ಮಾಡುವುದು ಮತ್ತು ತೊಂದರೆಗೆ ಒಳಗಾಗಿರತಕ್ಕಂಥ ರೈತರಿಗೆ ಪರಿಹಾರಧನವನ್ನು ಕೊಡಿಸುವುದು ಈ ನಾಲ್ಕು ಬೇಡಿಕೆಗಳನ್ನು ಇಟ್ಟು ಅವರು ಸರ್ಕಾರಕ್ಕೆ ಮನವಿ ಪತ್ರವನ್ನು ಕೊಟ್ಟಿದ್ದರು. ಆದರೆ ಪರಿಹಾರವನ್ನು ಕೊಡುವುದಕ್ಕಾಗಿ ಸರ್ಕಾರದಿಂದ ಸುಮಾರು ಒಂದು ಲಕ್ಷ ರೂಪಾಯಿಗಳು ಮಂಜೂರಾಗಿದ್ದು ಅದರಲ್ಲಿ ಎಂಟು ಎಕರೆಗಿಂತ ಜಾಸ್ತಿ ಇದ್ದವರಿಗೆ ಮಾತ್ರ ಸುಮಾರು ೨೦೦-೨೫೦ ರೂಪಾಯಿಗಳ ಪರಿಹಾರವನ್ನು ಕೊಟ್ಟಿದ್ದಾರೆ. ಆದರೆ ಈ ಪರಿಹಾರ ಧನ ಏನೇನು ಸಾಲದು. ಆದ್ದರಿಂದ ಕನಿಷ್ಟಪಕ್ಷ ೫೦೦ ರೂಪಾಯಿಗಳನ್ನಾದರೂ ಕೊಡಬೇಕೆಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಆದ್ದರಿಂದ ಸಂಬಂಧಪಟ್ಟ ಮಾನ್ಯ ಮಂತ್ರಿಗಳು ಇತ್ತಕಡೆ ತಮ್ಮ ಗಮನವನ್ನು ಹರಿಸಿ ಪರಿಹಾರಧನ ಮತ್ತು ಅವರು ಮನವಿ ಪತ್ರದಲ್ಲಿ ಆರ್ಪಿಸಿರುವ ಬೇಡಿಕೆಗಳನ್ನು ಪೂರೈಸಿ ಕೊಡಬೇಕೆಂದು ನಾನು ಕೇಳಿ ಕೊಳ್ಳುತ್ತೇನೆ.

ಶ್ರೀ ನಾಗರೆಡ್ಡಿ ಪಾಟೀಲ್.—ಸ್ವಾಮಿ ನಾನೂ ಕೂಡ ಆ ನೋಟೀಸ್‌ನಲ್ಲಿ ಸಹಿ ಮಾಡಿದ್ದೇನೆ. ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಮೊದಲೇ ಹೇಳಿದ ಹಾಗೆ ಅಲ್ಲಿನ ರೈತರು ಮಾಡಿದಂಥ ಕೃಷಿಯಲ್ಲಾ ಕೆಟ್ಟು ಹೋಗಿ ಅಲ್ಲಿನ ರೈತ ಕಾರ್ಮಿಕರು ಬಹಳ ತೊಂದರೆಯನ್ನು ಪಡುತ್ತಿದ್ದಾರೆ. ಆದ್ದರಿಂದ ಸರ್ಕಾರದ ಪತಿಯಿಂದ ಅವರಿಗೆ ಪರಿಹಾರ ಧನವನ್ನು ಕೊಡಿಸಿಕೊಡಬೇಕು. ಈಗ ಹಾಲಿ ಸರ್ಕಾರದವರು ಕೊಟ್ಟಿರುವ ಪರಿಹಾರಧನ ೨೫೦ ರೂಪಾಯಿಗಳು ಏನೇನು ಸಾಲದು, ಆ ಪರಿಹಾರ ಧನವನ್ನು ೫೦೦ ರೂಪಾಯಿಗಳಿಗೆ ಹೆಚ್ಚು ಮಾಡಬೇಕು. ಈಗ ಪರಿಹಾರ ಕೊಟ್ಟಿರುವುದು ಕೇವಲ ಎಂಟು ಎಕರೆ ಜಮೀನು ಇದ್ದವರಿಗೆ ಮಾತ್ರ. ಆದರೆ ೧೦-೧೫ ಎಕರೆ ಜಮೀನು ಇದ್ದವರಿಗೆ ಯಾವ ಪರಿಹಾರ ಕೂಡಸಿಕ್ಕಿಲ್ಲ. ಆದ್ದರಿಂದ ಅವರಿಗೂ ಕೂಡ ಪರಿಹಾರ ಧನ ಕೊಡಬೇಕೆಂದು ನಾನು ಸರ್ಕಾರದಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಗಮನ ಹರಿಸಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ಬಸವಣ್ಣಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಡಾ|| ವಿ. ಎಸ್. ಆಚಾರ್ಯರವರು ಮತ್ತು ನಾಗರೆಡ್ಡಿ ಪಾಟೀಲ್‌ರವರು ಈ ಸಭೆಯ ಗಮನವನ್ನು ಸೆಳೆದಿದ್ದಾರೆ. ಇದು ಬಹಳ ಪ್ರಮುಖವಾದಂಥ ವಿಷಯ. ಆದರೆ ಈ ಖಾತೆಯ ಮಂತ್ರಿಗಳು ಇಲ್ಲದೆ ಇರುವ ಕಾರಣ ಈಗ ಉತ್ತರ ಕೊಡಲು ಸಾಧ್ಯವಿಲ್ಲ. ಆದರೆ ಈ ವಿಷಯವನ್ನು ಸಂಬಂಧಪಟ್ಟ ಮಂತ್ರಿಗಳ ಗಮನಕ್ಕೆ ತಂದು ಈ ಬಗ್ಗೆ ಈ ಸಭೆಯಲ್ಲಿ ಒಂದು ಹೇಳಿಕೆಯನ್ನು ಕೊಡುವಂತೆ ವ್ಯವಸ್ಥೆ ಮಾಡುತ್ತೇವೆ.

ಅಧ್ಯಕ್ಷರು.—ಶ್ರೀ ಮಹದೇವ್, ತಾವು ತಮ್ಮ ಗಮನ ಸೆಳೆಯುವ ಸೂಚನೆಯ ಬಗ್ಗೆ ಮಾನ್ಯ ಮಂತ್ರಿಗಳ ಗಮನ ಸೆಳೆಯಬಹುದು.

ಶ್ರೀ ಎಸ್. ಕೆ. ಕಾಂತ.—ಸ್ವಾಮಿ ನಾನು ಒಂದು ನೋಟೀಸ್‌ನ್ನು ಕೊಟ್ಟಿದ್ದೆ. ಆದರೆ ಆ ದಿವಸ ಮಾನ್ಯ ಸಹಕಾರ ಸಚಿವರು ಒಂದು ಹೇಳಿಕೆಯನ್ನು ಕೊಡುತ್ತೇನೆಂದು ದಿನಾಂಕ ೧೮ನೇ ಜನವರಿ ೧೯೮೪ರಂದು ತಿಳಿಸಿದ್ದರು. ಆದರೆ ಈ ದಿವಸ ಮಾನ್ಯ ಸಚಿವರು ಸಭೆಯಲ್ಲಿ ಇದ್ದಾರೆ. ಆ ಬಗ್ಗೆ ಒಂದು ಹೇಳಿಕೆಯನ್ನು ಕೊಟ್ಟರೆ ಒಳ್ಳೆಯದು.